ಪ್ರಶ್ನೆಯನ್ನು ನಾನು ಕೇಳುವುದೇನೆಂದರೆ, ಈ ದಿಸೆಯಲ್ಲಿ ಪ್ರಾಥಮಿಕ ಶಿಕ್ಷಕರುಗಳಿಗೆ ಹೆಚ್ಚಿನ ಶಿಕ್ಷಣ ಅಂದರೆ ೪ ವರ್ಷದ ಅಧಿಕ ಶಿಕ್ಷಣ ಕೊಡುವುದರಿಂದ ಸರ್ಕಾರಕ್ಕೆ ಎಷ್ಟು ಖರ್ಚು ಬರುತ್ತದೆ? ಇನ್ನು ೩ನೇ ಪ್ರಶ್ನೆ ಎಂದರೆ, ಬಿ. ಎಡ್. ಕ್ಲಾಸಿಗೆ ಪ್ರಾಥಮಿಕ ಶಾಲೆಯ ಶಿಕ್ಷಕರು ಸೇರಿಕೊಳ್ಳಬೇಕಾದರೆ, ಡಿಗ್ರಿ ಅಂದರೆ ಪದವಿಗೆ ಸಮಾನವಾದ ವಿಶೇಷ ತರಬೇತಿ ಪಡೆದಿರಬೇಕೆಂದು ಮೈಸೂರು ಯೂನಿವರ್ಸಿಟಿ ನವರು ರಿಪೋರ್ಟ್ ಕೊಟ್ಟಿದ್ದಾರೆ. ೪ ವರ್ಷಗಳ ವಿಶೇಷ ತರಬೇತಿಯನ್ನು ಪಡೆದವರನ್ನೂ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರುಗಳನ್ನಾಗಿ ನೇಮಕ ಮಾಡುವುದರಿಂದ ಅವರು ಪಡೆದಂಥ ತರಬೇತಿಗೆ ಏನೂ ಬೆಲೆ ಬರುವುದಿಲ್ಲ. ಅದೂ ಅಲ್ಲದೆ ಅವರಿಗೆ ತರಬೇತಿ ಕೊಡುವುದಕ್ಕೆ ಸರ್ಕಾರ ವೃಥಾ ಖರ್ಚು ಮಾಡಿದಂತಾಗುತ್ತದೆನ್ನುವುದೇ ನನ್ನ ಭಾವನೆ ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ೧೯೫೨ನೇ ಇಸವಿಯಲ್ಲಿ ನೇಮಕಾತಿ ಮತ್ತು ಹುದ್ದೆಗಳ ನಿಯಮಗಳನ್ನು ಬದಲಾವಣೆ ಮಾಡಿ ಉರ್ದು ಮತ್ತು ಹಿಂದಿ ಭಾಷೆಗಳಿಗೆ ಶೇಕಡಾ ೨೫ರಷ್ಟು ಒಡ್ತಿಯನ್ನು ಕೊಡಬೇಕೆಂದು ಈ ಕಾನೂನನ್ನು ತಿದ್ದುಪಡಿ ಮಾಡಿದ್ದೇವೆ. ಅದೇ ಪ್ರಕಾರ ಕನ್ನಡ ಭಾಷೆಗೆ ಸಹ ಇದೇ ರೀತಿಯ ಸವಲತ್ತುಗಳನ್ನು ಕೊಡಬೇಕೆಂದು ಬೇಡಿಕೆ ಬಂದಿದೆ ನನಗೆ ವೈಯಕ್ತಿಕವಾಗಿ ಅವರ ಒಂದು ಬೇಡಿಕೆ ಸರಿಯೆಂದು ಕಾಣಿಸಿತ್ತದೆ. ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಸೂಕ್ತ ತಿದ್ದುಪಡಿಯನ್ನು ತಂದು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢ ಶಾಲೆಯ ಶಿಕ್ಷಕರಾಗಿ ಒಡ್ತಿಯನ್ನು ಕೊಡಬೇಕೆಂದು, ಇದರ ಬಗ್ಗೆ ಅವರಿಗೆ ಅವಕಾಶಗಳನ್ನು ಕಲ್ಪಿಸಿಕೊಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಸಭಾಧ್ಯಕ್ಷರೇ, ಸುಮಾರು ಮೂರು ವರ್ಷಗಳಿಂದ ಈ ಒಂದು ಬೇಡಿಕೆಯ ಬಗ್ಗೆ ಆಶ್ವಾಸನೆ ಬಂದಿದೆ. ಶ್ರೀ ಮಾನ್ ರಾಚಯ್ಯನವರು ವಿದ್ಯಾ ಮಂತ್ರಿಗಳಾಗಿದ್ದಾಗ, ಆನಂತರ ಶ್ರೀ ರಘುಪತಿಯವರು ವಿದ್ಯಾ ಮಂತ್ರಿಗಳಾಗಿದ್ದಾಗ ಇದೇ ರೀತಿಯ ಆಶ್ವಾಸನೆಗಳು ಬಂದಿವೆ. ಮೂರು ವರ್ಷಗಳಿಂದ ಸತತವಾಗಿ ಆಶ್ವಾಸನೆ ಬಂದಿದ್ದರೂ ಇದು ಕಾರ್ಯಗತ ಮಾತ್ರ ಆಗಿಲ್ಲ. ದಯವಿಟ್ಟು ಯಾವ ಕಾರಣಕ್ಕಾಗಿ ಆಗಿಲ್ಲ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್,—ಒಂದು ತಿಂಗಳಿನಲ್ಲಿ ಮಾಡುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಕಾವೇರಿ ಜಲ ವಿವಾದ ಕುರಿತು

೧೯೩೦ ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಕಂದಾಯ, ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಮತ್ತು ತಮಿಳುನಾಡುಗಳ ಮಧ್ಯೆ ಕಾವೇರಿ ವಿವಾದವು ಇನ್ನೂ ಇತ್ಯರ್ಥವಾಗಿಲ್ಲ ಎಂಬುದು ನಿಜವೇ ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಈ ವಿಷಯವಾಗಿ ಎಷ್ಟು ಸಭೆಗಳು ನಡೆದಿವೆ ?

ಇ) ಈ ವಿಷಯದ ಬಗ್ಗೆ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗಿದೆ ?

ಈ) ವಿವಾದವನ್ನು ಇತ್ಯರ್ಥಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನೆ ಮತ್ತು ನೀರಾವರಿ ಸಚಿವರು).—

ಅ) ಸಾಧು.

ಆ) ೧೯೭೨ರಿಂದ ಇಲ್ಲಿಯವರೆಗೆ ೧೪ ಅಂತರ ರಾಜ್ಯ ಮಂತ್ರಿಗಳ ಸಭೆ ನಡೆದಿದೆ.

ಇ) ವಿವಾದವು ೧೯೭೦ ರಿಂದಲೂ ಇದ್ದು ವಿಚಿತ್ರ ವಿವರವನ್ನು ಒದಗಿಸಲು ಸಾಧ್ಯವಾಗದು.

ಈ) ಸಂಘಾನದ ಮೂಲಕ ಇತ್ಯರ್ಥ ಮಾಡಲು ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಶ್ರೀ ಡಿ. ಎ. ಚಿನ್ನಪ್ಪ.—ಸರ್ಕಾರ ಎಷ್ಟು ಬೇಜವಾಬ್ದಾರಿಯಿಂದ ಉತ್ತರ ಕೊಟ್ಟಿದೆ ಎಂದರೆ ಕಾವೇರಿ ವಾಟರ್ ಡಿಸ್ಪ್ಯೂಟ್‌ನ ಬಗ್ಗೆ ಲೆಕ್ಕ ಕೊಡುವುದಕ್ಕೆ ಸಾಧ್ಯ ಇಲ್ಲವೆಂದು ಹೇಳಿದ್ದಾರೆ. ಹಾಗಾದರೆ ಇವರು ಲೆಕ್ಕ ಇಟ್ಟಿಲ್ಲವೆಂದು ಕಾಣಿಸುತ್ತದೆ ೧೯೭೦ ನೇ ಇಸವಿಯಿಂದ ಡಿಸ್ಪ್ಯೂಟ್ ಶುರುವಾಗಿದ್ದು ' ಈಗ ೧೯೮೮ನೇ ಇಸವಿಯ ಕವೆನ್ಷೆಮೆಂಟ್ ಆಗಿದೆ. ೧೯೭೪ರಲ್ಲಿ ಅಂತರರಾಜ್ಯ ಮಂತ್ರಿಗಳ ಸಭೆ ಮಾಡಿದ್ದಾರೆ. ಇದರ ಬಗ್ಗೆ ಲೆಕ್ಕ ಇಟ್ಟಿಲ್ಲವೋ ಅಥವಾ ಲೆಕ್ಕವೇ ಸಿಗುತ್ತಿಲ್ಲವೋ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂತಹ ಸಭೆಗಳು ರಾಜ್ಯದ ಮುಖ್ಯಮಂತ್ರಿಗಳ ಭೇಟಿ ಮೂಲಕ ನಡೆಯುತ್ತವೆ. ಇದಕ್ಕೆ ಹೆಚ್ಚಿನ ಖರ್ಚು ಇರುವುದಿಲ್ಲ. ದೆಹಲಿಯಲ್ಲಿ ಮೀಟಿಂಗ್ ಆದರೆ ದೆಹಲಿಗೆ ಹೋಗತಕ್ಕ ಟಿ. ಎ, ಡಿ. ಎ. ಮಾತ್ರ ಖರ್ಚು ಬರುತ್ತದೆಯೇ ಹೊರತು, ಕಾವೇರಿ ರಿಸ್ಪ್ಯೂಟ್‌ನಿಂದ ಕರ್ನಾಟಕ ತಮಿಳುನಾಡು ವಿವಾದಗಳಿಂದ ಖರ್ಚು ಜಾಸ್ತಿ ಆಗುವುದಿಲ್ಲ. ಈ ಸಭೆಗಳಲ್ಲಿ ಹೆಚ್ಚು ಖರ್ಚು ಬರುವುದೇ ಇಲ್ಲ. ೬೦ರಿಂದ ಮೀಟಿಂಗ್‌ಗಳು ನಡೆದಿದ್ದರೂ ಸಹ ಸಭೆಯಲ್ಲಿ ಹೆಚ್ಚು ಖರ್ಚು ಬರುವುದಿಲ್ಲ. ಇದರಲ್ಲಿ ಅಧಿಕಾರಿಗಳು ಇರುತ್ತಾರೆ, ಮಂತ್ರಿಗಳು ಇರುತ್ತಾರೆ. ಮುಖ್ಯಮಂತ್ರಿಗಳೂ ಸಾಗೂ ಅಧಿಕಾರಿಗಳು ದೆಹಲಿಗೆ ಹೋದರೆ ಟ್ರಾವಲಿಂಗ್ ಎಕ್ಸ್‌ಪೆಂಡೀಚರ್ ಮಾತ್ರ ಬರುತ್ತದೆ. ಈ ಮೀಟಿಂಗ್‌ಗೋಸ್ಕರ ಹೆಚ್ಚು ಖರ್ಚು ಬರುವುದಿಲ್ಲ. ಚಹಾ ಕಾಫಿ ವಗೈರೆ ಬಿಟ್ಟರೆ ಹೆಚ್ಚಿನ ಖರ್ಚು ಇಲ್ಲ, ಆದ್ದರಿಂದ ಇದರ ಬಗ್ಗೆ ಲೆಕ್ಕ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ೧೯೭೪ರಲ್ಲಿ ಕಾವೇರಿ ಅಗ್ರಿಮೆಂಟ್ ಆಗಿದೆ. ಮದ್ರಾಸ್ ಮತ್ತು ಮೈಸೂರಿಗೆ ಆಗಿರತಕ್ಕ ಅಗ್ರಿಮೆಂಟ್‌ನಲ್ಲಿ ಮುಖ್ಯವಾದ ವಿಷಯವನ್ನು ತಿಳಿಸಬೇಕು ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ. ಅಂತರರಾಜ್ಯ ಸಭೆಗಳಲ್ಲಿನ ಟರ್ಮ್ಸ್ ಆಫ್ ರೆಫರೆನ್ಸ್ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡುವ ಅವಶ್ಯಕತೆ ಇಲ್ಲ. ಕಾವೇರಿ ಬಗ್ಗೆ ಕಾಲಕಾಲಕ್ಕೆ ಚರ್ಚೆ ಆದಂತಹ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದರ ಬಗ್ಗೆ ವಿವಾರವಾದ ಮಾಹಿತಿಯನ್ನು ಒದಗಿಸಿದೆ. ನಮ್ಮ ಪಬ್ಲಿಕೇಶನ್‌ನಲ್ಲಿ ಇವುಗಳ ವಿವರ ಇದೆ. ಅದನ್ನು ತಮಗೆ ಕಳುಹಿಸಿ ಕೊಡುತ್ತೇನೆ. ತಾವು ನೋಡಬಹುದು.

ಅಧ್ಯಕ್ಷರು.—ಹಾಗಿದ್ದರೆ ತಾವು ಪ್ರಶ್ನೆ ಕೇಳಿ.

ಶ್ರೀ ಕೆ. ಬಿ. ಶಾಣಪ್ಪ.—ಈಗ ರಾಜ್ಯದಲ್ಲಿ ಅನುಸೂಚಿತ ಜಾತಿಗೆ ಸೇರಿದಸಂಸ್ಥೆಗಳವರು ಅನೇಕ ಕಡೆಗಳಲ್ಲಿ ಕಿರಿಯ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ನಮ್ಮ ಭಾಗದ ಶಾಂತನಗರ ಬಂಕೂರ್‌ನಲ್ಲಿ ಇಂತಹ ಒಂದು ಕಿರಿಯ ಕಾಲೇಜ್‌ನ್ನು ಪ್ರಾರಂಭ ಮಾಡಲು ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೧೯೮೪ರಲ್ಲಿ ಅನುಮತಿ ಸಿಕ್ಕಿದೆ. ಈ ಕಾಲೇಜು ಪ್ರಾರಂಭವಾಗಿ ೫ ವರ್ಷಗಳಾಯಿತು. ಆದರೆ ಇನ್ನೂ ಇದಕ್ಕೆ ಗ್ರಾಂಟ್ ಸಿಕ್ಕಿಲ್ಲ. ಇಂತಹ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಗ್ರಾಂಟ್ ಬಿಡುಗಡೆ ಮಾಡಲು ತಮ್ಮ ಕಡೆ ಬಂದಿದ್ದ ಫೈಲ್‌ಗಳನ್ನು ೨೨-೩-೮೮ ರಂದು ಕ್ಲಿಯರ್ ಮಾಡಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ ಕೊಟ್ಟಿದ್ದಾರೆ. ಆದರೆ ಈ ಸಂಸ್ಥೆಗೆ ಸಂಬಂಧಪಟ್ಟ ಫೈಲ್‌ನ್ನು ಮಾತ್ರ ಆರ್ಥಿಕ ಇಲಾಖೆಗೆ ಕಳುಹಿಸಿಕೊಡದೆ ತಮ್ಮ ಸೆಕ್ರೆಟೇರಿಯೆಟ್‌ನಲ್ಲಿಯೇ ಇಟ್ಟುಕೊಂಡಿದ್ದಾರೆ. ಇದಕ್ಕೆ ಕಾರಣ ಕೇಳಿದರೆ ಮುಖ್ಯಮಂತ್ರಿಗಳಿಂದ ಪತ್ರ ಬರಬೇಕು ಎಂದು ಹೇಳುತ್ತಾರೆ. ಆದರೆ ಮುಖ್ಯಮಂತ್ರಿಗಳಿಂದ ಈಗಾಗಲೇ ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ. ನೀವು ಈ ಫೈಲ್‌ನ್ನು ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟರೆ ಅವರು ಹಣ ಬಿಡುಗಡೆ ಮಾಡಲು ತಯಾರಿದ್ದಾರೆ. ನೀವು ಹಣ ಬಿಡುಗಡೆ ಮಾಡದ ಕಾರಣ ಅಲ್ಲಿನ ಅಧ್ಯಾಪಕರು ಬಹಳ ತೊಂದರೆಗೆ ಒಳಗಾಗಿದ್ದಾರೆ. ಆದ್ದರಿಂದ ಜನವರಿ ೧೯೮೮ರಿಂದ ಗ್ರಾಂಟ್ ಹಣವನ್ನು ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ಈ ಸಂಸ್ಥೆಗೆ ಸಂಬಂಧ ಪಟ್ಟಫೈಲ್‌ನ್ನು ನಾನು ಕೂಡಲೇ ಆರ್ಥಿಕ ಇಲಾಖೆಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಈ ಸಂಸ್ಥೆಗೆ ಗ್ರಾಂಟ್ ಬಿಡುಗಡೆ ಮಾಡುವುದನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಮುಖ್ಯಮಂತ್ರಿಗಳು ಪತ್ರ ಕಳುಹಿಸಿಕೊಟ್ಟಿದ್ದಾರೆ. ಆದರೆ ಗ್ರಾಂಟ್ ಹಣವನ್ನು ಬಿಡುಗಡೆ ಮಾಡಬೇಕೆಂದು ಅವರು ಪತ್ರ ಬರೆದರೆ ಮಾತ್ರ ಮುಂದಿನ ಕ್ರಮ ಕೈಕೊಳ್ಳುತ್ತೇವೆಂದು ನಿಮ್ಮ ಇಲಾಖೆಯವರು ಹೇಳುತ್ತಿದ್ದಾರೆ.

ಶ್ರೀ ಜೀವರಾಜ ಆಳ್ವ.—ನಾನು ಇದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್.—ಮಾಡಿಸಲು ಸಾಧ್ಯವಿದ್ದರೆ ಮಾತ್ರ ಮಾಡಿಸಿಕೊಡುತ್ತೇನೆಂದು ಹೇಳಿ

ಅಧ್ಯಕ್ಷರು.—ಮಾಡಿಸಿಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ಅವರು ಮಾಡಿಸಿಕೊಂಡು ತ್ತಾರೆ.

ವರಾಹಿ ನೀರಾವರಿ ಯೋಜನೆ.

೨೨೬೫. **ಶ್ರೀ ಜಿ. ಎಸ್. ಆಚಾರ್ (ಬೈಂದೂರು).**—ಮಾನ್ಯ ಕಂದಾಯ ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವರಾಹಿ ಜಲ ವಿದ್ಯುತ್ ಯೋಜನೆ ಕಾರ್ಯಾರಂಭ ಮಾಡಿದಾಗ ವಿದ್ಯುತ್ತಾಪದನಾ ಘಟಕಗಳಿಂದ ವ್ಯರ್ಥವಾಗಿ ಹರಿದು ಸಮುದ್ರ ಸೇರುವ ನಿಶ್ಚಿತ ಪ್ರಮಾಣದ ನೀರನ್ನು ನೀರಾವರಿಗಾಗಿ ಬಳಸಲು ವರಾಹಿ ನೀರಾವರಿ ಯೋಜನೆಯನ್ನು ರೂಪಿಸಿದ್ದು ನಿಜವಲ್ಲವೆ ?

ಆ) ಈ ಯೋಜನೆಗೆ ಹಿಂದೆ ಶಂಕುಸ್ಥಾಪನೆ ಆಗಿದ್ದು, ಮುಂದಿನ ಕಾರ್ಯಾರಂಭ ಮಾಡಲಾಗುವುದೆಂದು ಸಚಿವರು ಸದನದಲ್ಲಿ ಆಶ್ವಾಸನೆ ನೀಡಿದ್ದರೂ. ಜಲಾಶಯ ಕಾಮಗಾರಿ ಪ್ರಾರಂಭವಾಗದಿರಲು ಕಾರಣವೇನು ?

ಇ) ಈ ಯೋಜನೆಯಲ್ಲಿ ಈ ತನಕ ಯಾವ ಯಾವ ಕೆಲಸಕ್ಕಾಗಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ ?

ಈ) ಜಲಾಶಯ ಕಾಮಗಾರಿ ಪ್ರಾರಂಭಿಸಲಾಗುವುದು ಯಾವಾಗ ?

ಶ್ರೀ ಎಸ್. ಆರ್. ಬೊಮ್ಮಾಯಿ (ಯೋಜನಾ, ಕಂದಾಯ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಅಣೆಕಟ್ಟಿನ ಕಾರ್ಯ ಆರಂಭ ಮಾಡಲು ಅವಶ್ಯವಿರುವ ಕಾದಿರಿಸಿದ ಅರಣ್ಯ ಪ್ರದೇಶ ಬಿಡುಗಡೆ ಮಾಡಲು ಅರಣ್ಯ ಸಂರಕ್ಷಣಾ ಕಾಯಿದೆ ಪ್ರಕಾರ ಕೇಂದ್ರ ಸರ್ಕಾರದ ಅನುಮತಿ ಅಗತ್ಯ. ಈ ವಿಷಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ೧೯೮೮ ಮಾರ್ಚ್ ಅಂತ್ಯದವರೆಗೆ ಒಟ್ಟು ೧೭೨ ಲಕ್ಷ ರೂಪಾಯಿಗಳು ವ್ಯಯವಾಗಿದ್ದು, ವಿವರಗಳು ಕೆಳಕಂಡಂತಿವೆ.

೧	ಅಣೆಕಟ್ಟಿನ ತಳಪಾಯ ಅನ್ವೇಷಣೆ ಹಾಗೂ ಸರ್ವೆ ಆಫ್ ಇಂಡಿಯಾ ದಿಂದ ಏರಿಯಲ್ ಸರ್ವೆಕ್ಷೆ ನಡೆಸಿರುವುದು	...	೫೪ ಲಕ್ಷ ರೂಪಾಯಿಗಳು.
೨	ಯಂತ್ರೋಪಕರಣಗಳು	...	೧೧ ಲಕ್ಷ ,,
೩	ಯೋಜನಾ ರಸ್ತೆ, ಕಾಮಗಾರಿಗಳು	...	೨೨ ಲಕ್ಷ ,,
೪	ಕಟ್ಟಡಗಳು	...	೩೧ ಲಕ್ಷ ,,
೫	ಸಿಬ್ಬಂದಿ	...	೪ ಲಕ್ಷ ,,
೬	ಇತರೆ	...	೧೦ ಲಕ್ಷ ,,
		ಒಟ್ಟು	೧೭೨ ಲಕ್ಷ ರೂಪಾಯಿಗಳು.